



# ಚಿತ್ತಾರ ಬಿಡಿಸ್ಯಾವ ಓಸಿಪೋಡ್

ಯಾವುದೋ ದೇಶದ ನಕ್ಷೆಗಳಂತೆ, ಮರಳ ಕಲೆಯಂತೆ ಕಾಣುವ ಕಡಲ ಕಿನಾರೆಯ ಈ ಚಿತ್ತಾರಗಳು 'ಓಸಿಪೋಡ್'ಗಳು ಸೃಷ್ಟಿಸಿದ ಅದ್ಭುತ ಕಲಾಕೃತಿಗಳು.

**■ ಫಾಲ್ಗುಣ ಗೌಡ, ಅಚವೆ**







'ಚಿತ್ತಾರ ಬಿಡಿಸ್ಯಾವೆ ಮುಂಗಾರು ಮಳೆಮೋಡ
ದಂಡೆಯ ತುಂಬೆಲ್ಲಾ ಓಸಿಪೋಡ ದರ್ಬಾರ'

ಎಂದು ಕವಿಯಂತೆ ಹಾಡಬಹುದಾದ ಸಾಲಿನಂತೆ, ಚಿತ್ತಾರ ಬಿಡಿಸುವ ಕಡಲದಂಡೆಯಲ್ಲಿರುವ ಈ ಸಣ್ಣ ಸಣ್ಣ ಏಡಿಗಳು ದಂಡೆಯಲ್ಲಿ ವಾಕಿಂಗ್ ಹೊರಟವರನ್ನು ಆಕರ್ಷಿಸಿ ಮುದ ನೀಡುತ್ತವೆ. ಹಿಡಿಯ ಹೊರಟರೆ ಸರಕ್ಕನೆ ಓಡಿ ತಾವೇ ನಿರ್ಮಿಸಿಕೊಂಡಿರುವ ಉಸುಕಿನ 'ಬಿಲ'ದಲ್ಲಿ ಮರೆಯಾಗುತ್ತವೆ.

ದಂಡೆಯೆಂದರೆ ಎಲ್ಲರಿಗೂ ಅದಮ್ಯ ಚೈತನ್ಯ ನೀಡುವ ಸ್ಥಳ. ಸಂಜೆಯಾದರೆ ರಾಶಿ ರಾಶಿ ಜನ ದಂಡೆಯಲ್ಲಿ ಕುಳಿತು ಪಟ್ಟಾಂಗ ಹೊಡೆಯುತ್ತಾ ಆಹ್ಲಾದಕರ ವಾತಾವರಣ, ಅನುಭೂತಿಯನ್ನು ಅನುಭವಿಸುತ್ತಾರೆ. ಕವಿ ರವೀಂದ್ರರ 'ಗೀತಾಂಜಲಿ' ಕೃತಿಗೆ ಕಾರವಾರದ ದಂಡೆ ಸ್ಫೂರ್ತಿಯಾಗಿತ್ತಂತೆ. ಬದುಕಿನ ನೋವುಗಳನ್ನು ಸಂಕಟಗಳನ್ನು ಮರೆಯಾಗಿಸುವ ಶಕ್ತಿ ದಂಡೆಯ ಸಂಜೆಗಿರುತ್ತದೆ. ಅದಕ್ಕೆ ಮನುಷ್ಯನಿಗೂ ಮತ್ತು ಕಡಲದಂಡೆಗೂ ಒಂದು ಅಕಾರಣ ಸಂಬಂಧವಿದೆ.

ಈ ಮೇಲಿನ ಸಾಲನ್ನು ನಿಜಗೊಳಿಸುವಂತೆ 'ಓಸಿಪೋಡ್' ಬಿಡಿಸಿದ ಚಿತ್ತಾರಗಳು ದಂಡೆಯಲ್ಲಿ ಸಾಕ್ಷಿಯಾಗುತ್ತವೆ. 'ಓಸಿಪೋಡ್' ಎಂಬ ವೈಜ್ಞಾನಿಕ ಹೆಸರಿನ ಈ ಸಣ್ಣ ಸಣ್ಣ ಏಡಿಗಳು ದಂಡೆಯಲ್ಲಿ ಬಿಲವೊಂದನ್ನು ತೋಡಿಕೊಂಡು ಮನೆ ಮಾಡಿ ಅಲೆಗಳು ಹೊತ್ತು ತಂದ ಸತ್ತ ಮೀನಿನ ಚೂರುಗಳು, ಕಾಡಿನ ಮರಗಳ ಹಣ್ಣಿನ ಬೀಜಗಳು, ಮನುಷ್ಯನೆಸೆದ ತ್ಯಾಜ್ಯ ವಸ್ತುಗಳನ್ನು ತಿನ್ನಲು ಅಲೆಗಳಿಗಾಗಿ ಕಾಯುತ್ತಿರುತ್ತವೆ.

ಪಾಲಕರ ಜೊತೆ ಬಂದ ಸಣ್ಣ ಸಣ್ಣ ಮಕ್ಕಳು ಮತ್ತು ಅವರ ಮನೆ ನಾಯಿಗಳು ಈ ಏಡಿ ಮರಿಗಳನ್ನು ಅಟ್ಟಾಡಿಸಿ ಹಿಡಿಯಲು ಪ್ರಯತ್ನಿಸುತ್ತಿರುವ ದೃಶ್ಯಗಳು ಇಲ್ಲಿ ಸಾಮಾನ್ಯ. ಯಾರ ಜಪ್ತಿಗೂ ಸಿಗದ ಇವು ತಾವು ನಿರ್ಮಿಸಿಕೊಂಡ ಬಿಲದಲ್ಲಿ ಹುದುಗಿಬಿಡುತ್ತವೆ. ಬಿಲವನ್ನು ಬಗೆದು ನೋಡಿದರೂ ಉಸುಕಿನಲ್ಲಿ ಮರೆಯಾಗಿ ತಪ್ಪಿಸಿಕೊಳ್ಳುತ್ತವೆ.

ಓಸಿಪೋಡ್‌ಗಳು ಬಿಡಿಸುವ ಚಿತ್ತಾರಗಳು ಅತ್ಯದ್ಭುತ. ಯಾವುದೋ ದೇಶದ ಭೂಪಟಗಳಂತೆ ಕಾಣುವ ಇವುಗಳನ್ನು ದಂಡೆಗೆ ಬಂದವರು ಮೊಬೈಲ್‌ನಲ್ಲಿ ಫೋಟೊ ಕ್ಲಿಕ್ಕಿಸುತ್ತಾರೆ. ಜನರು ಕೂಡ ದಂಡೆಯಲ್ಲಿ ನಡೆಯುವಾಗ ಈ ಚಿತ್ತಾರಗಳನ್ನು ಹಾಳು ಮಾಡಲು ಮನಸ್ಸಾಗದೆ ಎಚ್ಚರಿಕೆಯಿಂದ ಹೆಜ್ಜೆ ಇಡುವುದನ್ನು ಕಾಣಬಹುದು.

ಇವು ಚಿತ್ತಾರ ಬಿಡಿಸುವ ಕ್ರಿಯೆ ಅದ್ಭುತ. ಉಸುಕನ್ನು ಕೊರೆದು ಆಳಕ್ಕಿಳಿದು ತಮ್ಮ ಬಾಯಲ್ಲಿರುವ ತೇವಾಂಶವನ್ನು ಮತ್ತು ಉಸುಕಿನ ತೇವಾಂಶವನ್ನು ಬೆರೆಸಿಕೊಂಡು ತಮ್ಮ ಚಿಕ್ಕ ಚಿಕ್ಕ ಕಾಲುಗಳಲ್ಲಿ ಅದನ್ನು ಸಣ್ಣ ಉಂಡೆಯನ್ನಾಗಿ ಮಾಡಿ ಹೊರಗೆ ತಂದಿಡುತ್ತವೆ. ಈ ಸಣ್ಣ ಸಣ್ಣ ಉಸುಕಿನ ಚೂರುಗಳೇ ನೋಡುವುದಕ್ಕೆ ಭೂಪಟದಂತೆ ಕಾಣುತ್ತವೆ. ಸತ್ತ ಮೀನಿನ ಚೂರು, ಕಾಡು ಹಣ್ಣಿನ ಬೀಜಗಳು ಸಿಕ್ಕರೆ ಅದನ್ನು ಅನಾಮತ್ತಾಗಿ ಎತ್ತಿಕೊಂಡು ಬಿಲದಲ್ಲಿ ತುಂಬುವ ಸನ್ನಿವೇಶವೇ ದಂಡೆಯ ಜನರಿಗೆ ಖುಷಿಕೊಡುತ್ತದೆ. ಅಲೆಗಳು ಕೂಡ ಮತ್ತೆ ಮತ್ತೆ ದಂಡೆಗಪ್ಪಳಿಸಿ ಅವುಗಳ ಬಿಲಗಳನ್ನು ಹಾಳು ಮಾಡಿದಾಗ ಮತ್ತೆ ಮತ್ತೆ ಬಿಲ ತೋಡುವ ಇವು ತಮ್ಮ ಹಿಂದಿನ ಮನೆಯಲ್ಲಿ ಸಂಗ್ರಹಿಸಿದ ಆಹಾರದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

ನೀವೂ ಒಮ್ಮೆ ಕಡಲ ದಂಡೆಗೆ ಬನ್ನಿ. ಓಸಿಪೋಡ್ ಚಿತ್ತಾರಗಳ ಕಣ್ತುಂಬಿಕೊಳ್ಳಿ. ಸಂಜೆಯ ದಿಗಂತದಲ್ಲಿನ ಬಂಗಾರದ ರಂಗಿನೊಂದಿಗೆ ಕಡಲ ಕಿನಾರೆಯಲ್ಲಿನ ಈ ಕಲೆಯನ್ನೂ ಆಸ್ವಾದಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in